2. ಪ್ರಶ್ನೋತ್ತರ

ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಪ್ರಶ್ನೆ ಸಂಖ್ಯೆ: 31 (275)

ಶ್ರೀ. ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)
(ಮಾನ್ಯ ಸದಸ್ಯರು ಗೈರು ಹಾಜರಿದ್ದರು)

ಕಾಮಗಾರಿಗಳು ಮತ್ತು ಅನುದಾನಗಳ ವಿವರಗಳು ಹಾಗೂ ನಾಲೆಗಳ ದುರಸ್ತಿ

32 : (105)

ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ.ಬಿ. (ಶ್ರೀರಂಗ ಪಟ್ಟಣ)

ಅ) ಶ್ರೀರಂಗ ಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಪ್ರಸ್ತುತ ಜಲ ಸಂಪನ್ಮೂಲ ಇಲಾಖೆಯಿಂದ ಕೈಗೊಂಡಿರುವ ಕಾಮಗಾರಿಗಳಾವುವು, ಅವುಗಳಿಗೆ ಪ್ರಸ್ತುತ ಸಾಲಿನಲ್ಲಿ ಒದಗಿಸಲಾಗಿರುವ ಅನುದಾನ ಎಷ್ಟು ;

ಆ) ಶ್ರೀರಂಗ ಪಟ್ಟಣ ತಾಲ್ಲೂಕಿನಲ್ಲಿ ಬರುವ 300 ವರ್ಷಗಳ ಹಳೆಯ ಕಾಲುವೆಗಳಾದ ಸಿ.ಡಿ.ಎಸ್. ವಿರಜಾ ನಾಲೆ, ದೇವರಾಯನಾಲೆ, ಆರ್.ಬಿ.ಎಲ್.ಎಲ್ ಹಾಗೂ ಎಲ್.ಬಿ.ಎಲ್.ಎಲ್. ನಾಲಾಗಳ ದುರಸ್ತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಇ) ಸಿ.ಡಿ.ಎಸ್. ವಿರಜಾ ನಾಲೆ, ದೇವರಾಯನಾಲೆ, ಆರ್.ಬಿ.ಎಲ್.ಎಲಲ್ಲಾಗೂ ಎಲ್.ಬಿ.ಎಲ್.ಎಲ್. ನಾಲೆಗಳ ಆಧುನೀಕರಣಕ್ಕೆ ಯಾವುದಾದರೂ ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ, ಹಾಗಿದ್ದಲ್ಲಿ, ಯಾವ ಯೋಜನೆ ಕೈಗೊಳ್ಳಲಾಗಿದೆ, ಹಾಗೂ ಅದಕ್ಕೆ ಒದಗಿಸಲಾಗಿರುವ ಅಂದಾಜು ಅನುದಾನವೆಷ್ಟು

ಈ) ಮಂಡ್ಯ ಜಿಲ್ಲೆ, ಶ್ರೀರಂಗ ಪಟ್ಟಣ ತಾಲ್ಲೂಕಿನ ಕರಿಘಟ್ಟ ಏತ ನೀರಾವರಿ ಪ್ರದೇಶವು ಮಳೆಯಾಶ್ರಿತ ಪ್ರದೇಶವಾಗಿದ್ದು, ಸದರಿ ಯೋಜನೆಯು ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸದೆ

ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು, (ವಿವರ ಒದಗಿಸುವುದು).

ಊ) ಕಾಲುವೆಗೆ ನೀರು ಬಿಡುವ ಮುನ್ನ ಸದರಿ ಕಾಲುವೆ ಮತ್ತು ಸಿ.ಡಿ ಕಾಮಗಾರಿಗಳ ದುರಸ್ತಿತಿಗಾಗಿ ಕರಿಷಟ್ಟ ಏತ ನೀರಾವರಿ ಯೋಜನೆಗಳನ್ನು ಪುನಶ್ಚೇತನಗೊಳಿಸಲು ಬಿಡುಗಡೆ ಮಾಡಿರುವ ಅನುದಾನ ಎಷ್ಟು (ವಿವರಗಳನ್ನು ಒದಗಿಸುವುದು)

ಋ) ಬನ್ನಹಳ್ಳಿ ಕೆರೆಯಿಂದ ನೇರಲಕೆರೆ ಹೊಸಕೆರೆಗೆ ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರಗಳನ್ನು ನೀಡುವುದು).

ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಅ) ಶ್ರೀರಂಗ ಪಟ್ಟಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2012–13 ನೇ ಸಾಲಿನಲ್ಲಿ ಒಟ್ಟಾರೆ 186 ಸಂಖ್ಯೆ ಮುಂದುವರಿದ ಕಾಮಗಾರಿಗಳಿಗೆ ಪ್ರಸಕ್ತ ಸಾಲಿನಲ್ಲಿ ರೂ. 1401.55 ಲಕ್ಷಗಳ ಅನುದಾನವನ್ನು ಹಾಗೂ 259 ಸಂಖ್ಯೆ ಹೊಸ ಕಾಮಗಾರಿಗಳಿಗೆ ಪ್ರಸಕ್ತ ಸಾಲಿನಲ್ಲಿ ರೂ.4885.13 ಲಕ್ಷಗಳ ಅನುದಾನವನ್ನು ಒದಗಿಸಿ ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಿಂದ ಕೈಗೊಳ್ಳಲಾಗಿದ್ದು, ಕಾಮಗಾರಿಗಳ ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಲಾಗಿದೆ.

ಆ) ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಬರುವ 300 ವರ್ಷಗಳ ಹಳೆಯ ಕಾಲುವೆಗಳಾದ ಸಿ.ಡಿ.ಎಸ್. ವಿರಜಾ ನಾಲೆ, ದೇವರಾಯನಾಲೆ, ಅರ್.ಬಿ.ಎಲ್.ಎಲ್ ಹಾಗೂ ಎಲ್.ಬಿ.ಎಲ್.ಎಲ್. ನಾಲಾಗಳ ದುರಸ್ತಿಗೆ ಸಂಬಂದವಾಗಿ ಈನಾಲೆಗಳನ್ನು ಆಧುನೀಕರಣಗೊಳಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಅವುಗಳ ಪ್ರಸ್ತುತ ಹಂತದ ವಿವರಗಳನ್ನು ಅನುಬಂಧ–2 ರಲ್ಲಿ ಒದಗಿಸಲಾಗಿದೆ.

ಇ) ಸಿ.ಡಿ.ಎಸ್. ವಿರಜಾ ನಾಲೆ, ದೇವರಾಯನಾಲೆ, ಅರ್.ಬಿ.ಎಲ್.ಎಲ್ ಹಾಗೂ ಎಲ್.ಬಿ.ಎಲ್.ಎಲ್. ನಾಲೆಗಳ ಆಧುನೀಕರಣ–ಗೊಳಿಸುವ ಕಾಮಗಾರಿಗಳನ್ನು ಕೈಗೊಳ್ಳಲು ಯೋಜಿಸಿ ಅವುಗಳಿಗೆ ಒದಗಿಸಲಾಗಿರುವ ಅನುದಾನದ ವಿವರಗಳನ್ನು ಅನುಬಂಧ–2 ರಲ್ಲಿ ಒದಗಿಸಲಾಗಿದೆ.

ಈ) ಬಂದಿದೆ ಕರಿಘಟ್ಟ ಏತ ನೀರಾವರಿ ಯೋಜನೆಯು ಸಣ್ಣ ನೀರಾವರಿ ಇಲಾಖೆಯ ಕಾರ್ಯವ್ಯಾಪ್ತಿಯಲ್ಲಿರುತ್ತದೆ. ಸದರಿ ಯೋಜನೆಯು 1976–77 ರಲ್ಲಿ ಪ್ರಾರಂಭಗೊಂಡು 1992–93 ರಲ್ಲಿ ಪೂರ್ಣಗೊಂಡ ನಂತರ 1997 ರವರೆಗೆ 225 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸಲಾಗಿದೆ.ನಂತರ ವಿದ್ಯುಚ್ಛಕ್ತಿ ಶುಲ್ಕ ಪಾವತಿಸದ ಕಾರಣ ವಿದ್ಯುತ್ ಇಲಾಖೆಯಿಂದ 1997ರಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡು ತದನಂತರ 2007ರಲ್ಲಿ ವಿದ್ಯುತ್ ಶುಲ್ಕ ಭರಿಸಲಾಗಿದೆ. ಆದರೆ ಯೋಜನೆಯು 10 ವರ್ಷಗಳ ಕಾಲ ಸ್ಥಗಿತಗೊಂಡಿದ್ದರಿಂದ, ಪಂಪು ಮತ್ತು ಮೋಟಾರುಗಳು ಹಾಗೂ ವಿದ್ಯುತ್ ಸಂಪರ್ಕ ಪುನರುಜ್ಜೀವನ ಕಾಮಗಾರಿ ಕೈಗೊಳ್ಳಲಾಗಿದ್ದು, 2009–10ನೇ ಸಾಲಿನಲ್ಲಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು, ಯೋಜನೆಯು ಚಾಲನೆಯಲ್ಲಿದೆ. 2010–11 ನೇ ಸಾಲಿನ ಬೇಸಿಗೆ ಬೆಳೆಗೆ ವಿದ್ಯುಚ್ಛಕ್ತಿ ಲಭ್ಯತೆಯನುಸಾರ ನೀರೊದಗಿಸಲಾಗಿರುತ್ತದೆ. ಸದರಿ ಯೋಜನೆಯನ್ನು 16 ಗಂಟೆಗಳ ಕಾಲಕ್ಕೆ ವಿನ್ಯಾಸಿತಗೊಳಿಸಿದ್ದು, 3 ರಿಂದ 4 ಗಂಟೆಗಳ ಕಾಲ ವಿದ್ಯುತ್‌ಸರಬರಾಜು ಆಗಿರುತ್ತದೆ. ಇದರಿಂದಾಗಿ ಪೂರ್ಣ ಪ್ರಮಾಣದ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸಲು ಸಾಧ್ಯವಾಗುತ್ತಿಲ್ಲ. 2010–11 ನೇ ಸಾಲಿನಲ್ಲಿ ಯೋಜನೆಯ ಕಾಲುವೆಗಳ ದುರಸ್ತಿಗಾಗಿಸರ್ಕಾರವು ವಿಶೇಷ ಯೋಜನೆಯಡಿ ರೂ.10.00 ಲಕ್ಷಗಳ ಅನುದಾನವನ್ನು ಒದಗಿಸಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಕರಿಘಟ್ಟ ಏತ ನೀರಾವರಿ ಯೋಜನೆಯ ಅಭಿವೃದ್ಧಿ ಕಾಮಗಾರಿ–2011–12 ನೇ ಸಾಲಿನ ಅಪೆಂಡಿಕ್ಸ್–"ಇ" (ಸಂಪುಟ–1) ರಲ್ಲಿ ಪ್ರಧಾನ ಕಾಮಗಾರಿಗಳು – ಕೆರೆಗಳ ಆಧುನೀಕರಣ ಅಡಿ ರೂ 90.00 ಲಕಗಳಿಗೆ ಮಂಜೂರಾತಿ ಆಗಿರುತ್ತದೆ. ಪ್ರಸ್ತುತ ಸದರಿಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಮಗಾರಿಯನ್ನು ಕೈಗೊಳ್ಳಲಾಗುವುದು. ವಿವರಗಳನ್ನು ಅನುಬಂಧ–3 ರಲ್ಲಿ ಒದಗಿಸಲಾಗಿದೆ.

ಉ) ಈ ಯೋಜನೆಗೆ 2012–13 ಸಾಲಿನ ಅಪೆಂಡಿಕ್ಸ್–"ಇ" ಸಂಪುಟ–2ರಲ್ಲಿ ಲೆಕ್ಕ ಶೀರ್ಷಿಕೆ ವಿಶೇಷ ಅಭಿವೃದ್ಧಿ ಯೋಜನೆಯಡಿ ರೂ. 150.00 ಲಕ್ಷಗಳಿಗೆ ಎರಡು ಕಾಮಗಾರಿಗಳು ಅನುಮೋದನೆ–ಗೊಂಡಿದ್ದು, ರೂ. 50.00 ಲಕ್ಷಗಳ ಅನುದಾನ ಒದಗಿಸಲಾಗಿದೆ. ಈಗಾಗಲೇ ವಿಶೇಷ

ಅಭಿವೃದ್ಧಿ ಯೋಜನೆಯಡಿ " ಕರಿಘಟ್ಟ ಏತ ನೀರಾವರಿ ಯೋಜನೆ ಟಿ.ಎಂ. ಹೊಸುರು ಶಾಖಾ ನಾಲೆಯ ದುಸ್ಥಿತಿಯಲ್ಲಿರುವ ಪೈಪ್ ಅಕ್ವಡೆಕ್ಟ್‌ಗಳ ಬದಲಾಯಿಸಿ ಢ್ರಾಫ್ಟ್ ಅಕ್ವಡೆಕ್ಟ್‌ಗಳ ನಿರ್ಮಾಣ"ಕ್ಕೆ ಟೆಂಡರ್ ಕರೆಯಲಾಗಿದ್ದು, ಗುತ್ತಿಗೆದಾರರನ್ನು ನೇಮಕ ಮಾಡಿ ಕಾಮಗಾರಿಯನ್ನು ನಿರ್ವಹಿಸಲಾಗುವುದು ಮತ್ತು ವಿದ್ಯುದ್ದೀಕರಣ ಕಾಮಗಾರಿಯ ಅಂದಾಜಿಗೆ ತಾಂತ್ರಿಕ ಮಂಜೂರಾತಿ ನೀಡಲು ಟೆಂಡರ್ ಆಧಾರದ ಮೇಲೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ.

ಊ) ಬನ್ನಹಳ್ಳಿ ಕೆರೆಯಿಂದ ನೇರಲಕೆರೆ ಹೊಸಕೆರೆಗೆ ಏತ ನೀರಾವರಿ ಯೋಜನೆಯು ರೂ.62.00 ಲಕ್ಷ ಅಂದಾಜು ಮೊತ್ತಕ್ಕೆ ತಾಂತ್ರಿಕ ಮಂಜೂರಾತಿ ಆಗಿದ್ದು, ಈ ಕಾಮಗಾರಿಯನ್ನು ಕೈಗೊಳ್ಳಲು ದಿನಾಂಕ:16–07–2012 (1ನೇ ಕರೆ) ರಂದು ಆಹ್ವಾನಿಸಿದ ಟೆಂಡರ್ ತಿರಸ್ಕೃತಗೊಂಡಿರುತ್ತದೆ. ನಂತರ ದಿನಾಂಕ: 16–10–2012 (2ನೇ ಕರೆ) ಅಲ್ಪಾವಧಿ, ಟೆಂಡರ್ ಆಹ್ವಾನಿಸಿದ್ದು, ಇದಕ್ಕೆ ಪ್ರತಿಕ್ರಿಯಿಸಿದ ಏಕೈಕ ಗುತ್ತಿಗೆದಾರರು ನಮೂದಿಸಿದ ದರಗಳು ಅಧಿಕವಾಗಿದ್ದುದರಿಂದ ಆ ಟೆಂಡರ್ ಅನ್ನು ತಿರಸ್ಕರಿಸಲಾಗಿದೆ. ತದನಂತರ ದಿನಾಂಕ: 05–01–2013 (3ನೇ ಕರೆ) ರಲ್ಲಿ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:105 ಕ್ಕೆ
ಅನುಬಂಧ–1

(ರೂ.ಕೋಟಿಗಳಲ್ಲಿ)

sl no	Head of account	V C Dn.,Mandya				KRS Dn., K R Sagar				D& I Dn., Bannur	
		Spillover		Fresh		Spillover		Fresh		Spillover	
		No of works	Grant	No Of works	Grant	No of works	Grant	No of works	Grant	No of works	Grant
1	Improvements to Pickups (General)	5	13.52	21	41.660	8	7.24	18	31.72	1	2.50
2	Improvements & maintenance of Road (General)	4	4.44	5	6.000	6	4.96	1	3.33		
3	Road (SCP)	3	15.00	5	35.000	22	49.50	15	39.75		
4	Building Special			1	0.400	9	9.11	3	3.00		
5	Upgradation of Functional Buildings					1	1.02	1	3.60		
6	Restoration of KRS Gates					3	291.06				

No. 2 VCC Dn, Mysore						Total No. of		Total No. of Fresh	
Fresh		Spillover		Fresh					
No of works	Grant	No of works	Grant	No of works	Grant	No of works	Grant	No of works	Grant
2	4.00					14.00	23.26	41.00	77.380
						10.00	9.40	6.00	9.330
10	25.50					25.50	64.50	30.00	100.250
						9.00	9.11	4.00	3.400
						1.00	1.02	1.00	3.600
						3.00	291.06	0.00	0.000

7	Improvements of KRS Garden					11	56.53	23	186.56		
8	Modernisation of AnicutCanals					6	813.80	2	1481.95		
9	Improvements to Canal System under KRS Project			2	3.010	1	2.03	2	1034.50		
10	Improvements to Canal Network in VC Command	29	34.16	4	652.410	13	32.72	8	15.23	11	3.35
11	Improvement to Anicut Canals					15	16.03	27	65.72		
12	Surveillance in KRS Dam							1	520.00		
13	Special repairs of Dam & Appurtnant works					3	3.55	6	19.45		

						11.00	56.53	23.00	186.560
						6.00	813.80	2.00	1481.950
						1.00	2.03	4.00	1037.510
3	4.80					53.00	70.23	15.00	672.440
						15.00	16.03	27.00	65.720
						0.00	0.00	1.00	520.000
						3.00	3.55	6.00	19.450

14	Maintenance of Anicut & Anicut Canals					7	6.75	21	23.40		
15	Special repairs in Anicut & Anicut Canals					16	15.55	17	44.17		
16	Water User Co-Op Society			1	1.400						
17	R&R of Tanks	2	4.80	1	0.700			1	1.50	1	3.00
18	Drinking Water Scheme							2	24.00		
19	Security of Dam							7	30.00		
20	Maintainance of Dam & Appurtnant Works							6	2.00.00		
21	Special repairs of Maintainance of Canal Network			1	2.000			3	16.50		
22	Maintainance of Colony & Buildings	1	0.62					9	11.51		
23	Maintainance of LIS			1	2.000						
24	Maintainance of Canal Networks	8	10.31	4	3.000			5	9.85		
25	Rehabilitation of DDUC										
	TOTAL	**52**	**82.85**	**46**	**747.58**	**121**	**1309.85**	**178**	**3765.74**	**13**	**8.85**

						7.00	6.75	21.00	23.400
						16.00	15.55	17.00	44.170
						0.00	0.00	1.00	1.400
4	39.27					3.00	7.80	6.00	41.474
						0.00	0.00	2.00	24.000
						0.00	0.00	7.00	30.000
						0.00	0.00	6.00	200.00
						0.00	0.00	4.00	18.500
						1.00	0.62	9.00	11.510
						0.00	0.00	1.00	2.000
9	4.14			6	44.10	8.00	10.31	24.00	61.085
				1	250.00	0.00	0.00	1.00	250.000
28	77.71	0	0	7	294.1	186.00	1401.55	259	4885.13

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:105 ಕ್ಕೆ ಅನುಬಂಧ–2

(ರೂ.ಕೋಟಿಗಳಲ್ಲಿ)

ಕ್ರ ಸಂ.	ಅಣೆಕಟ್ಟೆಯ ಹೆಸರು	ಅಂದಾಜು ಮೊತ್ತ	ಆಡಳಿತಾತ್ಮಕ ಅನುಮೋದನೆಯ ದಿನಾಂಕ	ಪ್ರಸ್ತುತ ಹಂತ	2012–13 ನೇ ಸಾಲಿನ ಅನುದಾನ
1	ದೇವರಾಯ	21.00	18.10.2011	ದೇವರಾಯ ಅಣೆಕಟ್ಟು ಹಾಗೂ ಅಣೆಕಟ್ಟು ಹಾಗೂ ಅಣೆಕಟ್ಟು ನಾಲೆಯ ಆಧುನಿಕರಣ ಕಾಮಗಾರಿಗಳ ರೂ.21.00 ಕೋಟಿಗಳ ಯೋಜನಾ ವರದಿಗೆ ದಿಂನಾಕ: 18–10–2011 ರಂದು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಆಗಿದ್ದು. ಅದರಂತೆ ತಾಂತ್ರಿಕ ಮಂಜೂರಾತಿ ಆಗಿದ್ದು, ಈ ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಆಹ್ವಾನಿಸಿದ್ದು, 5ನೇ ಕರೆಗೆ ಪ್ರತಿಕ್ರಿಯಿಸಿ ಬಂದ ಏಕೈಕ ಟೆಂಡರ್ ತಾಂತ್ರಿಕ ಉಪಸಮಿತಿಯ ತೆರವುಗೊಂಡಿದ್ದು, ಮುಂದಿನ ನಿಗಮದ ಮಂಡಳಿಯ ಸಭೆಯಲ್ಲಿ ಮಂಡಿಸಲು ಕ್ರಮವಹಿಸಿದೆ.	8.00

ಕ್ರ. ಸಂ.	ಅಣೆಕಟ್ಟೆಯ ಹೆಸರು	ಅಂದಾಜು ಮೊತ್ತ	ಆಡಳಿತಾತ್ಮಕ ಅನುಮೋದನೆಯ ದಿನಾಂಕ	ಪ್ರಸ್ತುತ ಹಂತ	2012–13 ನೇ ಸಾಲಿನ ಅನುದಾನ
2	ಚಿಕ್ಕದೇವರಾಯ ಸಾಗರ ವಿಸ್ತಾರಣಾ ನಾಲೆ	17.00	13.07.2012	ಈ ನಾಲೆಯ ಆಧುನೀಕರಣ ಕಾಮಗಾರಿಯ ರೂ.17.00 ಕೋಟಿ ಮೊತ್ತದ ಯೋಜನಾ ವರದಿಗೆ ದಿನಾಂಕ:13–07–2012 ರಂದು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಆಗಿದ್ದು, ಸದರಿ ಅಂದಾಜಿಗೆ ದಿನಾಂಕ:19–11–2012 ರಂದು ತಾಂತ್ರಿಕ ಮಂಜೂರಾತಿ ನೀಡಲಾಗಿದ್ದು, ದಿನಾಂಕ:19–12–2012 ರಂದು ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.	10.00
3	ವಿರಿಜಾ	83.00	–	ಈ ಅಣೆಕಟ್ಟೆ ನಾಲೆಯ ಆಧುನೀಕರಣ ಕಾಮಗಾರಿಯ ರೂ.83.00 ಕೋಟಿ ಮೊತ್ತದ ಯೋಜನಾ ವರದಿಗೆ ದಿನಾಂಕ:01–09–2012 ರಂದು ನಡೆದ ತಾತ್ರಿಕ ಉಪ ಸಮಿತಿಯ 76ನೇ ಸಭೆಯಲ್ಲಿ ತೆರವು ಪಡೆದು ದಿನಾಂಕ:17–10–2012 ರಂದು ಮಂಡಳಿಯ 39ನೇ ಸಭೆಯಲ್ಲಿ ಅನುಮೋದನೆಯ ನಂತರ ದಿನಾಂಕ:30–01–2013 ರಂದು ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸರ್ಕಾರದಿಂದ ಅನುಮೋದನೆ ಪಡೆದು ಈ ಕಾಮಗಾರಿಯನ್ನು ಕೈಗೊಳ್ಳಲು ಮುಂದಿನ ಕ್ರಮವಹಿಸಲಾಗುವುದು.	8.00

ಕ್ರ ಸಂ.	ಅಣೆಕಟ್ಟೆಯ ಹೆಸರು	ಅಂದಾಜು ಮೊತ್ತ	ಆಡಳಿತಾತ್ಮಕ ಅನುಮೋದನೆಯ ದಿನಾಂಕ	ಪ್ರಸ್ತುತ ಹಂತ	2012–13 ನೇ ಸಾಲಿನ ಅನುದಾನ
4	ಚಿಕ್ಕದೇವರಾಯ ಸಾಗರ	–	–	ಈ ಅಣೆಕಟ್ಟೆ ನಾಲೆಯ ಆಧುನೀಕರಣ ಕಾಮಗಾರಿಯ ಯೋಜನಾ ವರದಿಯು ತಯಾರಿಕಾ ಹಂತದಲ್ಲಿದೆ.	15.00
5	ಎಲ್.ಬಿ. ಎಲ್.ಎಲ್	–	–	ಈ ನಾಲೆಯನ್ನು ಅಭಿವೃದ್ಧಿಪಡಿಸುವ ರೂ.1.18 ಕೋಟಿ ಮೊತ್ತದ ಕಾಮಗಾರಿಯು ವಿಶ್ವೇಶ್ವರಯ್ಯ ನಾಲಾ ಜಾಲದ ಸಮಗ್ರ ಅಭಿವೃದ್ಧಿ ಕಾಮಗಾರಿಯ ರೂ.330.00 ಕೋಟಿ ಮೊತ್ತದ ಯೋಜನಾ ವರದಿಯಲ್ಲಿ ಸೇರ್ಪಡೆಗೊಂಡಿದ್ದು, ಈ ಸಮಗ್ರ ಯೋಜನಾ ವರದಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಆಗಿದ್ದು, ಈ ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿದೆ.	10.30
6	ಆರ್.ಬಿ. ಎಲ್.ಎಲ್	–	–	ಈ ನಾಲೆಯನ್ನು ಆಧುನೀಕರಣಗೊಳಿಸುವ ಸಲುವಾಗಿ ಸರ್ವೆ ಕಾರ್ಯ ಪ್ರಗತಿಯಲ್ಲಿದೆ.	–

ವಿಧಾನ ಸಭಾ ಸದಸ್ಯರಾದ ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ. ಇವರ ಪ್ರಶ್ನೆ ಸಂಖ್ಯೆ : 105 ಕ್ಕೆ ಅನುಬಂಧ–3

ರೂ.ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಅನುದಾನ	ವೆಚ್ಚ	ಪ್ರಸ್ತುತ ಹಂತ
	2011–12ನೇ ಸಾಲು					
1	4702 – ಕೆರೆಗಳ ಅಧುನೀಕರಣ (ಪ್ರಧಾನ ಕಾಮಗಾರಿಗಳು)	ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕರಿಘಟ್ಟ ಏತ ನೀರಾವರಿ ಯೋಜನೆ ಅಭಿವೃದ್ಧಿ ಕಾಮಗಾರಿ	90.00	36.00		ಸದರಿ ಕಾಮಗಾರಿಯು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ
2	4702–422 ವಿಶೇಷ ಘಟಕ ಯೋಜನೆ	ನೇರಳಕೆರೆ ಗ್ರಾಮದ ಚನ್ನಮ್ಮ ಕೋಂ ಲೇಟ್ ನಿಂಗಯ್ಯ, ಶಿವರಾಜು ಬಿನ್ ಚನ್ನಯ್ಯ ಹಾಗೂ ಇತರೆ ಹರಿಜನ ರೈತರ ಜಮೀನಿಗೆ ಗಂಗಾ ಕಲ್ಯಾಣ ಮಾದರಿಯನ್ನು ಕೊಳವೆ ಬಾವಿ ಕೊರೆದು ನೀರೋದಗಿಸುವ ಕಾಮಗಾರಿ	8.00	3.20		ಕಾಮಗಾರಿ ಪ್ರಗತಿಯಲ್ಲಿದೆ
3	4702–422 ವಿಶೇಷ ಘಟಕ ಯೋಜನೆ	ಹೆಬ್ಬಾಡಿ ಗ್ರಾಮದ ಹರಿಜನ ರೈತರಾದ ಶ್ರೀಮತಿ ಸಣ್ಣಮರಿಯಮ್ಮ ಕೋಂ ಲೇಟ್ ಮಂಚಯ್ಯರವರ ಜಮೀನಿಗೆ ಗಂಗಾ ಕಲ್ಯಾಣ ಮಾದರಿಯಲ್ಲಿ ಕೊಳವೆ ಬಾವಿ ಕೊರೆದು ಪಂಪ್ ಅಳವಡಿಸುವ ಕಾಮಗಾರಿ	4.00	1.60	1.51	ಕಾಮಗಾರಿ ಪ್ರಗತಿಯಲ್ಲಿದೆ

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಅನುದಾನ	ವೆಚ್ಚ	ಪ್ರಸ್ತುತ ಹಂತ
4	4702–422 ವಿಶೇಷ ಘಟಕ ಯೋಜನೆ	ಅರೆಕೆರೆ ಗ್ರಾಮದ ಮಾದಯ್ಯ ಬಿನ್ ಎಳವಯ್ಯ ಹಾಗೂ ಇತರೆ ಹರಿಜನ ರೈತರ ಜಮೀನಿಗೆ ಗಂಗಾ ಕಲ್ಯಾಣ ಮಾದರಿಯಲ್ಲಿ ಕೊಳವೆ ಬಾವಿ ಕೊರೆದು ನೀರೊದಗಿಸುವ ಕಾಮಗಾರಿ	9.00	3.60		ಕಾಮಗಾರಿ ಪ್ರಗತಿಯಲ್ಲಿದೆ
5	4702–422 ವಿಶೇಷ ಘಟಕ ಯೋಜನೆ	ಶೆಟ್ಟಿಹಳ್ಳಿ ಗ್ರಾಮದ ಹರಿಜನ ರೈತರ ಜಮೀನಿಗೆ ಗಂಗಾ ಕಲ್ಯಾಣ ಮಾದರಿಯಲ್ಲಿ ಕೊಳವೆ ಬಾವಿ ಕೊರೆದು ನೀರೊದಗಿಸುವ ಕಾಮಗಾರಿ	8.00	3.20		ಕಾಮಗಾರಿ ಪ್ರಗತಿಯಲ್ಲಿದೆ
6	4702–423 ಗಿರಿಜನ ಉಪ ಯೋಜನೆ	ಕಾಲ್ಕಕೆರೆ ಗ್ರಾಮದ ಗಿರಿಜನ ರೈತರ ಜಮೀನುಗಳಿಗೆ ಕೊಳವೆ ಬಾವಿ ಕೊರೆದು ನೀರೊದಗಿಸುವ ಕಾಮಗಾರಿ	8.00	3.20		ಕಾಮಗಾರಿ ಪ್ರಗತಿಯಲ್ಲಿದೆ
7	4702–423 ಗಿರಿಜನ ಉಪ ಯೋಜನೆ	ವಡೆಯಾಂಡಹಳ್ಳಿ ಗ್ರಾಮದ ಗಿರಿಜನ ರೈತರ ಜಮೀನುಗಳಿಗೆ ಕೊಳವೆ ಬಾವಿ ಕೊರೆದು ನೀರೊದಗಿಸುವ ಕಾಮಗಾರಿ	8.00	3.20	3.00	ಕಾಮಗಾರಿ ಪ್ರಗತಿಯಲ್ಲಿದೆ

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಅನುದಾನ	ವೆಚ್ಚ	ಪ್ರಸ್ತುತ ಹಂತ
	2012–13ನೇ ಸಾಲು					
8	4702–422 ವಿಶೇಷ ಘಟಕ ಯೋಜನೆ	ಹೆಬ್ಬಾಡಿ ಗ್ರಾಮದ ನಾರಯಣ ಬಿನ್ ಮಾದಯ್ಯ ಉಃಪಾಪ ಮತ್ತು ವೆಂಕಟಯ್ಯ ಬಿನ್ ವೆಂಕಟಯ್ಯ ಹಾಗೂ ಇತರೆ ಹರಿಜನರ ಜಮೀನಿಗೆ ಕೊಳವೆ ಬಾವಿ ಕೊರೆದು ನೀರೊದಗಿಸುವ ಕಾಮಗಾರಿ	7.00	2.80		2012–13ನೇ ಸಾಲಿನ ಅಪೆಂಡಿಕ್ಸ್ "ಇ" ಸಂಪುಟ 2ರಲ್ಲಿ ಈಗ ಕಾಮಗಾರಿಗಳು ಅನುಮೋದನೆಗೊಂಡಿದ್ದು, ಸದರಿ ಕಾಮಗಾರಿಗಳನ್ನು ಶೀಘ್ರವಾಗಿ ಕೈಗೊಂಡು ಪೂರ್ಣಗೊಳಿಸಲಾಗುವುದು.
9	4702–422 ವಿಶೇಷ ಘಟಕ ಯೋಜನೆ	ಗೆಂಡೆಹೊಸಳ್ಳಿ ಗ್ರಾಮದ ಶ್ರೀಕಂಠಯ್ಯ ಬಿನ್ ಮುತ್ತಯ್ಯ ಹಾಗೂ ಇತರೆ ಹರಿಜನರ ಜಮೀನಿಗೆ ಕೊಳವೆ ಬಾವಿ ಕೊರೆದು ನೀರೊದಗಿಸುವ ಕಾಮಗಾರಿ	7.00	2.80		2012–13ನೇ ಸಾಲಿನ ಅಪೆಂಡಿಕ್ಸ್ "ಇ" ಸಂಪುಟ 2ರಲ್ಲಿ ಈಗ ಕಾಮಗಾರಿಗಳು ಅನುಮೋದನೆಗೊಂಡಿದ್ದು, ಸದರಿ ಕಾಮಗಾರಿಗಳನ್ನು ಶೀಘ್ರವಾಗಿ ಕೈಗೊಂಡು ಪೂರ್ಣಗೊಳಿಸಲಾಗುವುದು.
10	4702–422 ವಿಶೇಷ ಘಟಕ ಯೋಜನೆ	ಹೆಬ್ಬಾಡಿ ಗ್ರಾಮದ ಹರಿಜನ ರೈತರಾದ ಶ್ರೀ.ಕುಂಟಸಿಂಗ್ರಯ್ಯರವರ ಜಮೀನಿನ ಹತ್ತಿರ ಪಿಕಪ್ ನಿರ್ಮಾಣ	4.50	1.80		2012–13ನೇ ಸಾಲಿನ ಅಪೆಂಡಿಕ್ಸ್ "ಇ" ಸಂಪುಟ 2ರಲ್ಲಿ ಈಗ ಕಾಮಗಾರಿಗಳು ಅನುಮೋದನೆಗೊಂಡಿದ್ದು, ಸದರಿ ಕಾಮಗಾರಿಗಳನ್ನು ಶೀಘ್ರವಾಗಿ ಕೈಗೊಂಡು ಪೂರ್ಣಗೊಳಿಸಲಾಗುವುದು.

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಅನುದಾನ	ವೆಚ್ಚ	ಪ್ರಸ್ತುತ ಹಂತ
11	4702–422 ವಿಶೇಷ ಘಟಕ ಯೋಜನೆ	ಹಂಪಾಪುರ ಗ್ರಾಮದ ಹರಿಜನ ರೈತರ ಜಮೀನಿನ ಹತ್ತಿರ ಪಿಕಪ್ ನಿರ್ಮಾಣ	4.50	1.80		2012–13ನೇ ಸಾಲಿನ ಅಪೆಂಡಿಕ್ಸ್ "ಇ" ಸಂಪುಟ 2ರಲ್ಲಿ ಈಗ ಕಾಮಗಾರಿಗಳು ಅನುಮೋದನೆಗೊಂಡಿದ್ದು, ಸದರಿ ಕಾಮಗಾರಿಗಳನ್ನು ಶೀಘ್ರವಾಗಿ ಕೈಗೊಂಡು ಪೂರ್ಣಗೊಳಿಸಲಾಗುವುದು.
12	4702–422 ವಿಶೇಷ ಘಟಕ ಯೋಜನೆ	ಹೆಬ್ಬಾಡಿ ಗ್ರಾಮದ ಮಾಯಿಗಯ್ಯ ಹಾಗೂ ಇತರೆ ಹರಿಜನರ ಜಮೀನಿಗೆ ಕೊಳವೆ ಬಾವಿ ಕೊರೆದು ನೀರೊದಗಿಸುವ ಕಾಮಗಾರಿ	5.00	2.00		2012–13ನೇ ಸಾಲಿನ ಅಪೆಂಡಿಕ್ಸ್ "ಇ" ಸಂಪುಟ 2ರಲ್ಲಿ ಈಗ ಕಾಮಗಾರಿಗಳು ಅನುಮೋದನೆಗೊಂಡಿದ್ದು, ಸದರಿ ಕಾಮಗಾರಿಗಳನ್ನು ಶೀಘ್ರವಾಗಿ ಕೈಗೊಂಡು ಪೂರ್ಣಗೊಳಿಸಲಾಗುವುದು.
13	4702–423 ಗಿರಿಜನ ಉಪ ಯೋಜನೆ	ಗೊಬ್ಬರಗಾಲ ಗ್ರಾಮದ ಗೌರಮ್ಮ ಕೋಂ ಕಾಳೀರಯ್ಯ ಹಾಗೂ ಇತರೆ ಗಿರಿಜನರ ಜಮೀನುಗಳಿಗೆ ಕೊಳವೆ ಬಾವಿ ಕೊರೆದು ನೀರೊದಗಿಸುವ ಕಾಮಗಾರಿ	10.00	4.00		2012–13ನೇ ಸಾಲಿನ ಅಪೆಂಡಿಕ್ಸ್ "ಇ" ಸಂಪುಟ 2ರಲ್ಲಿ ಈಗ ಕಾಮಗಾರಿಗಳು ಅನುಮೋದನೆಗೊಂಡಿದ್ದು, ಸದರಿ ಕಾಮಗಾರಿಗಳನ್ನು ಶೀಘ್ರವಾಗಿ ಕೈಗೊಂಡು ಪೂರ್ಣಗೊಳಿಸಲಾಗುವುದು.

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಅನುದಾನ	ವೆಚ್ಚ	ಪ್ರಸ್ತುತ ಹಂತ
	2012–13ನೇ ಸಾಲು					
14	4702–00–800–8–00–133–ವಿಶೇಷ ಅಭಿವೃದ್ಧಿ ಯೋಜನೆ	ಕರಿಘಟ್ಟ ಏತ ನೀರಾವರಿ ಯೋಜನೆಯ ಟಿ.ಎಂ. ಹೊಸೂರು ಶಾಖಾ ನಾಲೆಯ ದುಸ್ತಿತಿಯಲಿರುವ ಪೈಪ್ ಅಕ್ವಡೆಕ್ಟಗಳ ಬದಲಾಯಿಸಿ ಡ್ರಾಫ್ಟ್ ಅಕ್ವಡೆಕ್ಟಗಳ ನಿರ್ಮಾಣ ಕಾಮಗಾರಿ.	100.00	33.33		2012–13ನೇ ಸಾಲಿನ ಅಪೆಂಡಿಕ್ಸ್ "ಇ" ಸಂಪುಟ 2ರಲ್ಲಿ ಈಗ ಕಾಮಗಾರಿಗಳು ಅನುಮೋದನೆಗೊಂಡಿದ್ದು, ಸದರಿ ಕಾಮಗಾರಿಗಳನ್ನು ಶೀಘ್ರವಾಗಿ ಕೈಗೊಂಡು ಪೂರ್ಣಗೊಳಿಸಲಾಗುವುದು.
15	4702–00–800–8–00–133–ವಿಶೇಷ ಅಭಿವೃದ್ಧಿ ಯೋಜನೆ	1ನೇ ಹಂತ ಮತ್ತು 2ನೇ ಹಂತಗಳಿಗೆ ಹೊಸದಾಗಿ ಎ.ಟಿ.ಎಸ್. ಸ್ಟಾರ್ಟರ್‌ಗಳನ್ನು ಸರಬರಾಜು ಅಳವಡಿಸುವುದು ಹಾಗೂ ಇತರೆ ವಿದ್ಯುತ್ ದುರಸ್ತಿ ಕಾಮಗಾರಿ	50.00	16.67		2012–13ನೇ ಸಾಲಿನ ಅಪೆಂಡಿಕ್ಸ್ "ಇ" ಸಂಪುಟ 2ರಲ್ಲಿ ಈಗ ಕಾಮಗಾರಿಗಳು ಅನುಮೋದನೆಗೊಂಡಿದ್ದು, ಸದರಿ ಕಾಮಗಾರಿಗಳನ್ನು ಶೀಘ್ರವಾಗಿ ಕೈಗೊಂಡು ಪೂರ್ಣಗೊಳಿಸಲಾಗುವುದು.

ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ.ಬಿ.: ಮಾನ್ಯ ಅಧ್ಯಕ್ಷರೆ, ನಾನು ಎರಡು-ಮೂರು ಪ್ರಶ್ನೆಗಳನ್ನು ಕೇಳಿದ್ದೇನೆ. ಒಂದು ಉತ್ತರ ಬಂದಿದೆ, ಇದು ಸರ್ಕಾರದ ಮುಂದೆ ಇದೆ ಅದನ್ನು ಅನುಮೋದನೆ ಪಡೆದುಕೊಂಡು ನಿಗಮದ ಮಂಡಳಿಯ ಸಭೆಯಲ್ಲಿ ಮಂಡಿಸಿ ಆಮೇಲೆ ಅದನ್ನು ಪ್ರಾರಂಭ ಮಾಡುತ್ತೇನೆಂದು ಹೇಳಿದ್ದೀರಿ ದಿಂನಾಕ: 18-10-2011 ರಲ್ಲಿ ಅದು ಬಂದಿರುವಂಥದು. ಈ ಚಿಕ್ಕದೇವರಾಯನಾಲೆಯ ಯೋಜನೆ ಇನ್ನೂತಯಾ-ರು ಮಾಡುವ ಹಂತದಲ್ಲಿದೆ. ದಯಮಾಡಿ ಆ ಬಗ್ಗೆ ಸರ್ಕಾರದ ಮುಖಾಂತರ ಒತ್ತಾಯ ಮಾಡುತ್ತೇನೆ. ಕೂಡಲೇ ಅದನ್ನು ಟೆಂಡರ್ ಮಾಡಿಸಿ ಸರ್ವೆ ಮಾಡಲಿಕ್ಕೆ ತಾವು ಆದೇಶವನ್ನು ಕೊಡಬೇಕು. ಇವತ್ತು ವಿರಿಜಾನಲೆ, ದೇವರಾಯನಾಲೆಯ ಬಗ್ಗೆ ಕಾವೇರಿ ನೀರಾವರಿ ನಿಗಮದ ಆಡಳಿತ ಮಂಡಳಿಯ ಮುಂದುಗಡೆ ಇನ್ನೂ ಪೆಂಡಿಂಗ್ ಇದೆ ಎನ್ನುವ ವಿಚಾರವನ್ನು ಮಾನ್ಯ ಮಂತ್ರಿಯವರು ಪ್ರಸ್ತಾಪ ಮಾಡಿದ್ದಾರೆ. ದಯಮಾಡಿ ಅದು ಯಾವಾಗ ಆಗುತ್ತದೆ ಎನ್ನುವಂಥದ್ದನ್ನು ಸ್ಪಷ್ಟಪಡಿಸಬೇಕೆಂದು ನಾನು ತಮ್ಮ ಮುಖಾಂತರ ಕೇಳುತ್ತೇನೆ. ದಿನಾಂಕ: 17-10-2012 ರಲ್ಲಿ ಸರ್ಕಾರ ಅನುಮೋದನೆಯನ್ನು ಕೊಟ್ಟಿದೆ, ಟೆಕ್ನಿಕಲ್ ಬೋರ್ಡ್ ಮುಂದೆ ಕ್ಲೀಯರ್ ಆಗಿದೆ ಎಂದು ಹೇಳುತ್ತಾರೆ. ಅದನ್ನು ನಿಗಮದಿಂದ ಕ್ಲೀಯರ್ ಮಾಡುವುದಕ್ಕೆ ಎಷ್ಟು ಅವಧಿ ಬೇಕು? ಈಗ ನೀರು ನಿಲ್ಲಿಸಿದ್ದಾರೆ. ನಿಮಗೆ ನೀರು ಇಲ್ಲ. ಇಂತಹ ಸಮಯದಲ್ಲಿ ಕೂಡಲೇ ಟೆಂಡರ್ ಕರೆದು ಕಾಮಗಾರಿಗೆ ಚಾಲನೆಯನ್ನು ಕೊಟ್ಟರೆ ಏಪ್ರಿಲ್, ಮೇ ತಿಂಗಳಕೊನೆಗಾದರೂ ಮುಗಿಯುತ್ತ-ದೆ. ಆಗ ನೀರು ಬಿಡುವ ಬಗ್ಗೆ ಸಮರ್ಪಕವಾಗಿ ಕೆಲಸವನ್ನು ಮಾಡಬಹುದು. ಸುಮಾರು 300 ವರ್ಷಗಳ ಹಳೆಯ ನಾಳೆ. ಮೊದಲನೆಯ ಹಂತ, ಮಧ್ಯದ ಹಂತ ಅಥವಾ ಕೊನೆಯ ಹಂತ ಇರಬಹುದು, ನೀರು ತೆಗೆದುಕೊಂಡು ಹೋಗುವುದಕ್ಕೆ ಪ್ರತಿ ವರ್ಷ ನಾವು ಯುದ್ಧೋಪಾದಿಯಲ್ಲಿ ಕೆಲಸವನ್ನು ಮಾಡುತ್ತಿದ್ದೇವೆ. ಸರ್ಕಾರಕ್ಕೆ ಈ ಹಿಂದೆ ಹಲವಾರು ಸಲ ವಿನಂತಿಯನ್ನು ಮಾಡಿರುತ್ತೇನೆ. ಈಗ ತಮ್ಮನ್ನು ವಿನಂತಿ ಮಾಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾವು ಅದಕ್ಕೆ ಟೆಂಡರ್ ಕರೆದಿರುತ್ತೇವೆ. ಈ ತಿಂಗಳೊಳಗೆ ಟೆಂಡರ್ ಪ್ರಕ್ರಿಯೆಯನ್ನು ಮುಗಿಸಿ ವರ್ಕ್ ಆರ್ಡರ್‌ನ್ನು ಕೊಡುತ್ತೇವೆ. ವಿರಿಜಾನಾಲೆ ಏನಿದೆ ಅದಕ್ಕೆ

ಇನ್ನು 15 ದಿವಸದೊಳಗೆ administrative order ನ್ನು ಕೊಡುತ್ತೇವೆ. ಇದನ್ನು CDS ಮತ್ತು RBLL ಸರ್ವೆ ಕಾರ್ಯಕ್ಕೆ ಈಗಾಗಲೇ ಆದೇಶವನ್ನು ಮಾಡಿದ್ದೇವೆ. DPR ಬಂದ ತಕ್ಷಣ ಅದಕ್ಕೂ ಆಡಳಿತಾತ್ಮಕ ಅನುಮೋದನೆ–ಯನ್ನು ಕೊಡುತ್ತೇವೆ. ಒಟ್ಟಾರೆ ತಮ್ಮ ಭಾಗದಲ್ಲಿ ಬರುವಂಥ ಈ ಮಹಾರಾಜರ ಅಣೆಕಟ್ಟು ಏನಿದೆ ಅವೆಲ್ಲವೂ ಕೂಡ 2013–14ರ ಒಳಗಡೆ ಆದೇಶ ಕೊಟ್ಟು ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭ ಮಾಡುತ್ತೇವೆ. ಈಗಾಗಲೇ ಟೆಂಡರ್ ಪ್ರಕ್ರಿಯೆಯಲ್ಲಿರುವುದಕ್ಕೆ ವರ್ಕ್ ಆರ್ಡರ್ ಕೊಡುತ್ತೇವೆ.

ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ.ಬಿ: ಮಾನ್ಯ ಅಧ್ಯಕ್ಷರೆ, ಕಾವೇರಿ ನೀರಾವರಿ ನಿಗಮದ ಮುಂದೆ ಆಡಳಿತಾತ್ಮಕ ಅನುಮೋದನೆಗಾಗಿ ಮಂಡಿಸಿದ್ದೇವೆಂದು ಹೇಳುತ್ತಿದ್ದಾರೆ. ದಯವಿಟ್ಟು ತಮ್ಮ ಮುಂದೆ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಬಯಸುತ್ತೇನೆ. ದಿನಾಂಕ:19–12–2012 ರಿಂದ ಇಲ್ಲಿಯವರೆಗೆ ಟೆಂಡರ್ ಪ್ರಕ್ರಿಯೆಗೆ ಅನುಮೋದನೆಯನ್ನೇ ಪಡೆಯದೆ ಹೋದರೆ ಅನುಮೋದನೆ ಪಡೆಯುವುದು ಯಾವಾಗ? ಟೆಂಡರ್ ಕರೆಯುವುದು ಯಾವಾಗ? ಇದು ಯಾವಾಗ ಮುಗಿಯುವುದು ಸರ್?

ಶ್ರೀ ಬಸವರಾಜ್ ಎಸ್.ಬೊಮ್ಮಾಯಿ : ಮಾನ್ಯ ಅಧ್ಯಕ್ಷರೆ, ನಿಗಮದ ಮುಂದೆ, ಶ್ರೀ ಬಸವರಾಜ್ ಎಸ್.ಬೊಮ್ಮಾಯಿ ಮಾನ್ಯ ಅಧ್ಯಕ್ಷರೆ, ನಿಗಮದ ಮುಂದೆ, TAC ಯ ಮುಂದೆ ಕೆಲವು observations ಆಗಿತ್ತು. ಆ observantions corrections ಮಾಡಿದ್ದು ಎರಡನೇ ಬಾರಿ TAC ಯಲ್ಲಿ approval ಆಗಿದೆ. ನಿಗಮದ ಸಭೆ ಕರೆಯಬೇಕೆಂದು ಮಾನ್ಯ ಮುಖ್ಯಮಂತ್ರಿಯವರಿಗೆ ಕೇಳಿಕೊಂಡಿದ್ದೇವೆ. ಈ ಅಧಿವೇಶನ ಮುಗಿದ ತಕ್ಷಣವೇ ನಿಗಮದ ಸಭೆ ಕರೆದು ಅನುಮೋದನೆ ಮಾಡಿ ಅದಕ್ಕೆ ಆಡಳಿತಾತ್ಮಕ ಅನುಮೋದನೆಯನ್ನೂ ಕೊಡುತ್ತೇವೆ.

ಅಧ್ಯಕ್ಷರು: ಆಯಿತು.